


# ಭೂಮಿ ತೂಕದ ಕಣ್ಣು

■ ಪ್ರವೀಣ ಕುಲಕರ್ಣಿ

'ಗಗನದಲ್ಲಿ ಹೊಸದನ್ನು ಹುಡುಕುವ ವ್ಯವಧಾನ, ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿದ್ದರೂ ಭೂಮಿಯದ್ದೇ ಧ್ಯಾನ' – ಇದು ಬ್ರಿಟನ್ ಸಾಹಿತಿ ಸಮಂತಾ ಹಾರ್ವೆ ಅವರ 'ಆರ್ಬಿಟಲ್' ಕೃತಿಯ ಹೂರಣ. ಮುದ್ರಣಗೊಳ್ಳುತ್ತಲೇ ಫಟಾಫಟ್ ಅಂತ 29 ಸಾವಿರ ಪ್ರತಿಗಳ ಮಾರಾಟ ಕಂಡಿರುವ ಈ ಕೃತಿಗೆ ಪ್ರಸಕ್ತ ವರ್ಷದ ಬೂಕರ್ ಪ್ರಶಸ್ತಿ ಸಂದಿದೆ. ಬೂಕರ್ ಪ್ರಶಸ್ತಿ ಪಡೆದ ಮೊದಲ ಬಾಹ್ಯಾಕಾಶ ಸಂಬಂಧಿ ಕೃತಿ, ವಿಜ್ಞಾನ ಮತ್ತು ಕಾವ್ಯ ಒಂದೆಡೆ ಸಂಧಿಸಿ ಮೈದಳೆದ ಕೃತಿ ಎಂಬ ಹಿರಿಮೆಗೂ ಈ ಕಾದಂಬರಿ ಪಾತ್ರವಾಗಿದೆ.

ಆರು ಜನ ಗಗನಯಾನಿಗಳು ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಲ್ಲಿ ಹೇಗೆ ಒಂದು ದಿನವನ್ನು ಕಳೆದರು ಎನ್ನುವುದು ಈ ಪುಟ್ಟ ಕಾದಂಬರಿಯ ತಿರುಳು. ಬಾಹ್ಯಾಕಾಶದಲ್ಲಿ ಅವರು 16 ಸೂರ್ಯೋದಯಗಳನ್ನೂ ಅಷ್ಟೇ ಪ್ರಮಾಣದ ಸೂರ್ಯಾಸ್ತಗಳನ್ನೂ ಕಂಡ ಕಥೆಯನ್ನು ಈ ಕೃತಿ ಹೊಂದಿದೆ. ಗಗನದಲ್ಲಿ ನಿಂತು ಭೂಮಿಯನ್ನು ಅವಲೋಕಿಸುವ ಈ ವಿಶಿಷ್ಟ ಕೃತಿ ಸಹಜವಾಗಿಯೇ ಓದುಗರ ಮನಸೂರೆಗೊಂಡಿದೆ. 'ನಾನು ಆಯ್ಕೆ ಮಾಡಿಕೊಂಡ ಕಥಾವಸ್ತು ತುಸು ವಿಲಕ್ಷಣವಾದುದು ಎನ್ನುವಂತೆ ಗೋಚರಿಸುತ್ತದೆ. ಏಕೆಂದರೆ, ಬಾಹ್ಯಾಕಾಶದ ಕುರಿತು ನಿಜ ಹೇಳಬೇಕೆಂದರೆ ನನಗೇನೂ ಗೊತ್ತಿಲ್ಲ. ಆದರೆ, ಅದರ ಕುರಿತು ನಾನು ಸದಾ ಕುತೂಹಲಿ' ಎಂದು ಸಮಂತಾ ಹೇಳುತ್ತಾರೆ.

'ಅಂತರರಾಷ್ಟ್ರೀಯ ಬಾಹ್ಯಾಕಾಶ ಕೇಂದ್ರದಿಂದ ಬಂದ ವಿಡಿಯೊ ತುಣುಕುಗಳನ್ನು ನಾನು ತುಂಬಾ ಕುತೂಹಲದಿಂದ ಗಮನಿಸಿದ್ದೇನೆ. ಗಗನಯಾನಿಗಳ ಆ ತುಣುಕುಗಳು ನನ್ನ ಮೇಲೆ ಎಷ್ಟರಮಟ್ಟಿಗೆ ಪ್ರಭಾವ ಬೀರಿವೆ ಎಂದರೆ ಅವರೊಂದಿಗೆ ನಾನೂ ಭೂಮಿಯನ್ನು ಸುತ್ತಿದಂತೆ ಭಾಸವಾಗಿದೆ. ಹಾಗೆ ಅವರೊಂದಿಗೆ ಸುತ್ತಿದ ಕಲ್ಪನೆಗಳೇ 'ಆರ್ಬಿಟಲ್' ಕೃತಿಯ ರೂಪ ತಾಳಿವೆ' ಎಂದು ಅವರು ವಿವರಿಸುತ್ತಾರೆ. ಆರ್ಬಿಟಲ್ ಕೃತಿಯಲ್ಲಿನ ಘಟನಾವಳಿಗಳ ಕಾಲಾವಧಿ ಬರೀ 24 ಗಂಟೆ. ಭೂಮಿಯ ಕಕ್ಷೆಯಲ್ಲಿ ಸುತ್ತುವಾಗ ಪ್ರತಿಯೊಂದು ಪಾತ್ರವೂ ಈ ಅವಧಿಯಲ್ಲಿ ತನ್ನ ನೆನಪುಗಳನ್ನು ಹೆಕ್ಕಿ ತೆಗೆಯುತ್ತದೆ, ಆತಂಕಗಳ ಕುರಿತು ಮುಕ್ತವಾಗಿ ಚರ್ಚಿಸುತ್ತದೆ. ಕೇವಲ 136 ಪುಟಗಳ ಕಾದಂಬರಿ ಇದು. ಬಾಹ್ಯಾಕಾಶದಲ್ಲಿ ಬಿಚ್ಚಿಕೊಳ್ಳುವ ಕಥೆಯನ್ನು ಈ ಕಾದಂಬರಿ ಹೊಂದಿದ್ದರೂ ಭೂಮಿಯ ಕುರಿತೇ ಹೆಚ್ಚು ಧೇನಿಸಿದೆ. 'ಗಾಯಗೊಂಡ ಜಗತ್ತಿನ ಕುರಿತು ಮಾತನಾಡುವ ಈ ಕೃತಿ, ಸುಂದರವಾಗಿದೆ ಮತ್ತು ಮಹತ್ವಾಕಾಂಕ್ಷೆಯನ್ನು ಹೊಂದಿದೆ' ಎಂದು ಆಯ್ಕೆ ಸಮಿತಿ ಕೊಂಡಾಡಿದೆ.

ಬಾಹ್ಯಾಕಾಶ ಕೇಂದ್ರದಿಂದ ಆರು ಜನ ಗಗನಯಾನಿಗಳು ಭೂಮಿಯ ಮೇಲಿನ ಎಲ್ಲ ವ್ಯಾಪಾರವನ್ನು ಸೂಕ್ಷ್ಮವಾಗಿ ಗಮನಿಸುತ್ತಾರೆ. ದೇಶದ ಗಡಿಗಳು, ಟೈಮ್ ಝೋನ್‌ಗಳು, ಅಲ್ಲಿನ ಬೆಳವಣಿಗೆಗಳು ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುತ್ತಾ ಓದುಗರ ಮುಂದೆ ತಮ್ಮ ಭೂಮಿಯ ಕುರಿತು ಹೊಸದೊಂದು ಚಿತ್ರಣವನ್ನೇ ತೆರೆದಿಡುತ್ತಾರೆ. ಹಲವು ಪ್ರಶ್ನೆಗಳನ್ನು ಓದುಗರ ಮುಂದಿಡುತ್ತಾ, ಮುಂದಿರುವ ಸವಾಲುಗಳನ್ನು ನೆನಪಿಸುತ್ತಾ ಸಾಗುವ ಕೃತಿ, ಪ್ರತಿಯೊಬ್ಬರಿಗೂ ಭೂಮಿಯ ಮೇಲೆ ಪ್ರೀತಿ ಉಕ್ಕುವಂತೆ ಮಾಡುತ್ತದೆ. ಅಲ್ಲದೆ, ಪ್ರತಿಯೊಬ್ಬರ ಕರ್ತವ್ಯವನ್ನೂ ನೆನಪಿಸುತ್ತದೆ. ಬೇರೆಯವರ ಸಾಂಗತ್ಯ ಜತೆಗಿದ್ದರೂ ಗಗನಯಾನಿಗಳು ಹೇಗೆ ಏಕಾಂತವನ್ನು ಅನುಭವಿಸುತ್ತಾರೆ ಎಂಬುದನ್ನು ಮನೋಜ್ಞವಾಗಿ ಚಿತ್ರಿಸಲಾಗಿದೆ. ಆ ಮೂಲಕ ಮಾನವೀಯ ಮೌಲ್ಯಗಳ ಕುರಿತು ಚರ್ಚೆಯನ್ನು ವಿಸ್ತರಿಸಲಾಗಿದೆ. ಕಥೆಗೆ ಆಯ್ಕೆ ಮಾಡಿಕೊಂಡ ಗಗನಯಾನಿಗಳೂ ಅಷ್ಟೆ. ಅಮೆರಿಕ, ರಷ್ಯಾ, ಜಪಾನ್, ಇಂಗ್ಲೆಂಡ್ ಮತ್ತು ಇಟಲಿಯಿಂದ 'ಬಂದವರು' ಅವರು. ಈ ವೈವಿಧ್ಯ ಕಥನಕ್ರಮಕ್ಕೆ ಸಿರಿತನ ತುಂಬಿದೆ. ಏಕೆಂದರೆ, ಪ್ರತಿಯೊಬ್ಬ ಗಗನಯಾತ್ರಿಯೂ ತನ್ನದೇ ಆದ ವಿಶಿಷ್ಟ ಸಂಸ್ಕೃತಿಯನ್ನೂ ಜತೆಗೆ ಹೊತ್ತು ತಂದರೆ, ಅನುಭವ ಕೂಡ ಭಿನ್ನವಾಗಿದೆ. ಆದರೆ, ಮಾನವೀಯತೆ ಮುಂದೆ ಎಲ್ಲ 'ಗಡಿ'ಗಳೂ ಅಳಿಸಿಹೋಗುವುವು ಎಂದು ಕೃತಿ ಸಾರುತ್ತದೆ. ಇದು, ಕೊನೆಗೆ ನಮ್ಮ ಕುವೆಂಪು ಅವರು ಕಟ್ಟಿಕೊಡುವ ವಿಶ್ವಮಾನವ ಸಂದೇಶದ ಹಾದಿ ಹಿಡಿದಂತೆ ಭಾಸವಾಗುತ್ತದೆ.

ಹವಾಮಾನ ಬದಲಾವಣೆಯ ಪರಿಣಾಮಗಳ ಕುರಿತು ತೀವ್ರ ಆತಂಕವನ್ನು ಹೊಂದಿರುವ 'ಆರ್ಬಿಟಲ್'ಗೆ ಅಜರ್‌ಬೈಜಾನ್‌ನಲ್ಲಿ ನಡೆದ ಜಾಗತಿಕ ಹವಾಮಾನ ಶೃಂಗದ ಸಂದರ್ಭದಲ್ಲೇ ಪ್ರಶಸ್ತಿ ಬಂದಿರುವುದು ಕಾಕತಾಳೀಯ. 'ನಾವು ಭೂಮಿಯನ್ನು ಹೇಗೆ ದುರ್ಬಳಕೆ ಮಾಡಿಕೊಂಡು ಕಸದಬುಟ್ಟಿ ಮಾಡಿದ್ದೇವೆಯೋ ಬಾಹ್ಯಾಕಾಶವನ್ನೂ ಹಾಗೇ ದುರ್ಬಳಕೆ ಮಾಡಿಕೊಂಡು ಅಲ್ಲಿಯೂ ಕಸ ತುಂಬುತ್ತಿದ್ದೇವೆ. ಭೂಮಿಯನ್ನು ರಕ್ಷಿಸಿ ಎಂಬುದನ್ನು ಹೊರತುಪಡಿಸಿದರೆ ಈ ಕೃತಿಯನ್ನು ಬರೆಯುವಲ್ಲಿ ನನಗೆ ಬೇರೆ ಯಾವ ಅಜೆಂಡಾ ಇರಲಿಲ್ಲ' ಎಂದು ಸಮಂತಾ ಹೇಳುತ್ತಾರೆ. 'ಯಾರು, ಯಾರು ಈ ಭೂಮಿಯ ಪರವಾಗಿ ಮಾತನಾಡುವರೋ ಅವರಿಗೆಲ್ಲ ಈ ಪ್ರಶಸ್ತಿ ಅರ್ಪಣೆ' ಎನ್ನುತ್ತಾರೆ ಈ ಲೇಖಕಿ. ಭೂಮಿಯ ಕುರಿತು, ಹವಾಮಾನ ವೈಪರೀತ್ಯದ ಕುರಿತು, ಮಾಸುತ್ತಿರುವ ಮಾನವೀಯ ಮೌಲ್ಯಗಳ ಕುರಿತು ಅಂತಃಕರಣದಿಂದ ಚರ್ಚಿಸಿರುವ ಕೃತಿಗೆ ಪ್ರಶಸ್ತಿ ಸಂದಿರುವುದು, ಭೂಮಿಯ ಮೇಲಿನ ಎಲ್ಲ ಜೀವಿಗಳಿಗೆ ಇಂದಿನ ತುರ್ತು ಏನೆಂಬುದನ್ನು ನೆನಪಿಸುವಂತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65